ಇದೊಂದು ನಿರಂತರ ವ ಧೆಯು ಅಸಹಕಾಯಕ ವ್ಯವಸ್ಥೆ ಈ ರಸ್ತೆಯು ಸ್ವಾಬರ ಕಟ್ಟಿ ಗೋಳಿ ಅಂಗಡಿ ಭಾಗದ ಧೂಳಿನ ಗೋಳು ಯಾವ 'ಸಾಹೇಬರಿಗೂ' ಮುಟ್ಟಿಲ್ಲವೆಂದರೆ, ಇದು ಈ ಭಾಗದ ಜನರ ದುರದೃಷ್ಟವೇ ಸರಿ. ಸಂಕಾರದ ಸಾರ್ವಜನಿಕ ಕಾಮಗಾರಿ ಇಲಾಖೆಯು ನಿರ್ವಹಣೆಯಲ್ಲಿರುವ ಈ ರಸ್ತೆಯಲ್ಲಿ ಬಹಳಷ್ಟು ಬಸ್ಸು, ಲಾರಿ ಮತ್ತು ಇನ್ನಿತರ ವಾಹನಗಳು ಸಂಚರಿಸುತ್ತಿದ್ದು ಅದಷ್ಟು ಬೇಗ ಈ ರಸ್ತೆಯ ಉಳಿದ ಭಾಗಕ್ಕೆ ಡಾಮರಿನ ಹೊದಿಕೆಯಾಗುವಂತೆ ಸೂಕ್ತ ಕ್ರಮ ಕೈಕೊಳ್ಳಬೇಕೆಂದೂ ತತ್ಪರಿಣಾಮವಾಗಿ ಗೋಳಿ ಅಂಗಡಿಯವರ ಗೋಳು, ಅವರು ಧೂಳು ತಿನ್ನುವ ಅವಸ್ಥೆ, ಪಂಡರಿ ನವರ ತಕರಾರು, ಬಿಲ್ಲಾಡಿಯವರ ಬೊಬ್ಬೆ ತಪ್ಪಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ. ರಘುಪತಿ.— ಸಂಬಂಧಪಟ್ಟ ಮಾನ್ಯ ಸಚಿವರಿಂದ ಉತ್ತರ ತರಿಸಿಕೊಡುತ್ತೇನೆ.

೧೬) ತುಮಕೂರು ಜಿಲ್ಲೆಯಲ್ಲಿ ವ್ಯವಸಾಯ ಸೇವಾ ಸಹಕಾರ ಸಂಘಗಳಿಗೆ ಕಾರ್ಯದರ್ಶಿಗಳನ್ನು ನೇಮಿಸುವುದು.

ಶ್ರೀ ಬಿ ಲಕ್ಕಪ್ಪ.— ಮಾನ್ಯ ಅಧ್ಯಕ್ಷರೇ, ತುಮಕೂರು ಜಿಲ್ಲೆಯಲ್ಲಿ ಇವರು ಅನೇಕ ವ್ಯವಸಾಯ ಸೇವಾ ಸಹಕಾರ ಸಂಘಗಳಲ್ಲಿ ಕಾರ್ಯದರ್ಶಿಗಳು ಇರುವುದಿಲ್ಲ. ಆದ್ದರಿಂದ ಈ ಸಹಕಾರ ಸಂಘಗಳ ಕಾರ್ಯ ಸ್ಥಗಿತವಾಗಿ, ಗ್ರಾಮಾಂತರ ಪ್ರದೇಶದ ಜನರಿಗೆ ಅಗತ್ಯ ವಸ್ತುಗಳ ವಿತರಣೆಗೆ ತೊಂದರೆಯಾಗಿದೆ. ಕಾರ್ಯದರ್ಶಿಗಳ ನೇಮಕಕ್ಕೆ ಇರುವಂಥ ತೊಂದರೆಯೇನು ? ಅದಷ್ಟು ಬೇಗ ಕಾರ್ಯದರ್ಶಿಗಳನ್ನು ನೇಮಕ ಮಾಡಿ, ಸೇವಾ ಸಹಕಾರ ಸಂಘಗಳು ಕಾರ್ಯನಿರ್ವಹಿಸುವಂತೆ ಕ್ರಮ ತೆಗೆದುಕೊಳ್ಳಬೇಕಾಗಿ ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಹೆಚ್. ವಿಶ್ವನಾಥಯ್ಯ.— ಮಾನ್ಯ ಅಧ್ಯಕ್ಷರೇ, ತುಮಕೂರು ಜಿಲ್ಲೆಯಲ್ಲಿರುವ ವ್ಯವಸಾಯ ಸೇವಾ ಸಹಕಾರ ಸಂಘಗಳ ಕಾರ್ಯದರ್ಶಿಗಳ ಹುದ್ದೆಗಳನ್ನು ಅದಷ್ಟು ಬೇಗ ತುಂಬಲು ಸಂಬಂಧಪಟ್ಟವರಿಗೆ ಸೂಚನೆ ಕೊಡುತ್ತೇನೆ.

17) Extending Stipendary benefit to the Government nominees in Private Medical Colleges.

SRI D. A, CHINNAPPA.— The Government of Karanataka has been selecting candidtes and allot them for the various private medical colleges. in Karnataka State. It has been brought to the notice that while those students undergoing house-surgeon course in the hospital they have been denied the benefit of giving stipend. While givieng stipend to the students of Government medical colleges, it is just and proper to extend the same benefit to the medical students of Government nominee inthe private medical colleges. I draw the kind attention of the Government to take immediate action to extend the stipend benefit to the Government nominee students in private medical colleges who are undergoing house-surgeon courses.

SRI M RAGHUPATHY (Minister for Fisheries and Ports).— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಿಗೆ ಉತ್ತರ ತರಿಸಿಕೊಡುತ್ತೇನೆ.

೧೮) ದಕ್ಷಿಣಕನ್ನಡ ಜಿಲ್ಲಾಪರಿಷತ್ತಿಗೆ ಸಿಬ್ಬಂದಿಯನ್ನು ನೇಮಿಸುವುದು.

ಶ್ರೀ ವಸಂತ ವಿ ಸಾಲಿಯಾನ.— ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾಪರಿಷತ್ತಿನ ಎಲ್ಲಾ ಇಲಾಖೆಗಳಲ್ಲಿ ಸುಮಾರು ೨೦೦೦ ಸಿಬ್ಬಂದಿಗಳ ಕೊರತೆಯಿದೆ ಎಂದು ತಿಳಿದು ಬಂದಿದೆ. ೧೯೮೭ಕ್ಕೆ

ಕಾರ್ಯ ಆರಂಭಿಸಿದ ಜಿಲ್ಲಾ ಪರಿಷತ್ತು ಇವರ ಬಳಿಗೆ ಈ ಸಿಬ್ಬಂದಿಗಳನ್ನು ನೇಮಿಸಬೇಕಿತ್ತು. ಇದರಿಂದಾಗಿ ಎಲ್ಲಾ ಇಲಾಖೆಗಳ ಕೆಲಸ ಕಾರ್ಯಗಳು ಕುಂಠಿಗೆತೊಂಡಿವೆ. ಗ್ರಾಮಾಂತರ ಪ್ರದೇಶಗಳಲ್ಲಿ ಅಭಿವೃದ್ಧಿ ಕೆಲಸಗಳಿಗೆ ಅಡಚಣೆಯಾಗಿದೆ. ಸರ್ಕಾರ ಕೂಡಲೇ ಪರಿಶೀಲಿಸಿ ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾಪಂಚಾಯತ್ತಿನ ಎಲ್ಲಾ ಇಲಾಖೆಗಳಲ್ಲಿ ಸಿಬ್ಬಂದಿಗಳನ್ನು ನೇಮಿಸಬೇಕಾಗಿ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎ ಲಕ್ಷ್ಮೀಸಾಗರ್. — ಮಾನ್ಯ ಸದಸ್ಯರಿಗೆ ಉತ್ತರ ತರಿಸಿಕೊಡುತ್ತೇನೆ.

ಶ್ರೀ ಆರ್. ಎನ್. ನಾಯಕ್. — ಸ್ವಾಮಿ ಇವರು ಯಾವುದಕ್ಕೆ ಉತ್ತರ ತರಿಸಿಕೊಟ್ಟಿದ್ದಾರೆ ?

ಉಪಾಧ್ಯಕ್ಷರು. — ಉತ್ತರ ತರಿಸಿಕೊಡುತ್ತಾರೆ, ದಯವಿಟ್ಟು ತಾವು ಕುಳಿತುಕೊಳ್ಳಿ.

ಶ್ರೀ ಆರ್. ಎನ್. ನಾಯಕ್. — ಸರಕಾರಿ ನೌಕರರಂ ಯಾರು, ನಿಮ್ಮ ಪ್ರಾತನ್ನು ಕೇಳುವುದಿಲ್ಲ.

ಉಪಾಧ್ಯಕ್ಷರು. — ದಯವಿಟ್ಟು ಕುಳಿತುಕೊಳ್ಳಿ, ತರಿಸಿ ಕೊಡುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ. — ನಮ್ಮ ಪ್ರೊಫೆಸರ್ ಪ್ರಾತು ಯಾರು ಕೇಳುವುದಿಲ್ಲ ಅಂದರೆ ಏನು ಸ್ವಾಮಿ,

1988-89ರ ಆಯವ್ಯಯದ ಮೇಲಿನ ಸಾಮಾನ್ಯ ಚರ್ಚೆ

† ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—(ಗುರುಮಿಟ್ಕಲ್) ಸನ್ಮಾನ್ಯ ಅಧ್ಯಕ್ಷರೆ, ನಾನು ನಿನ್ನೆಯ ದಿವಸ ಭಾಷಣವನ್ನು ಸ್ವಲ್ಪ ಪ್ರಾರಂಭ ಮಾಡಿದ್ದೆ ಅಷ್ಟರಲ್ಲಿ ಮಾನ ಮುಖ್ಯಮಂತ್ರಿಗಳು ಬಾರ್ಡರ್ ಇಷ್ಯು ಮೇಲೆ ಒಂದು ರೆಸಲ್ಯೂಷನ್ ತಂದು ಮಾತನಾಡುತ್ತೇನೆಂದು ಹೇಳಿದಾಗ ನನ್ನ ಭಾಷಣವನ್ನು ಪೊಟಕಿಗೊಳಿಸಲಾಯಿತು. ಈಗ ಪ್ರಾರಂಭ ಮಾಡುತ್ತಿದ್ದೇನೆ. ೧೯೮೮-೮೯ನೇ ಸಾಲಿನ ಬಡ್ಜೆಟ್ಟನ್ನು ಮಾನ್ಯ ಮುಖ್ಯಮಂತ್ರಿಗಳು ಈ ಸದನದ ಮುಂದೆ ಮಂಡಿಸಿದ್ದಾರೆ. ಈ ಬಡ್ಜೆಟ್ಟಿನಲ್ಲಿ ಏನಾದರೂ ವಿಶೇಷವಾದಂಥ ಸವಲತ್ತುಗಳಾಗಲಿ, ಅಥವಾ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಹೆಚ್ಚಿನ ಸಹಾಯ ಮಾಡತಕ್ಕದ್ದು ಆಗಲಿ, ಬಡವರ ಬಗ್ಗೆ ಆನುಕಂಪವಿಟ್ಟು ಕೆಲಸ ಮಾಡತಕ್ಕದ್ದು ಆಗಲಿ ಕಾಣತರೆ. ಹಿಂದುಳಿದ ಏಳಿಗೆಗಾಗಿ ಯಾವುದಾದರೂ ಹೊಸ ಯೋಜನೆಗಳು ಇದೆಯೇ ಎಂದು ಆಸೆ ಇಟ್ಟುಕೊಂಡು ಮಾನ್ಯ ಮುಖ್ಯಮಂತ್ರಿಯವರು ಮಂಡಿಸಿರತಕ್ಕ ಬಡ್ಜೆಟ್ ನೋಡಿದರೆ ಅವರ ೩೦ ಪುಟದ ಭಾಷಣದಲ್ಲಿ ೧೫ ಪುಟ ಕೇಂದ್ರ ಸರ್ಕಾರವನ್ನು ದೂರುವುದರಲ್ಲಿ. ಅವರಿಗೆ ಹಿಯ್ಯಾಳಿಸಿ ಮಾತನಾಡುವುದರಲ್ಲಿಯೇ ಮುಗಿದಿದೆ. ಇನ್ನು ನಮ್ಮ ರಾಜ್ಯದ ಅನೇಕ ಸೆಕ್ಟಾರ್ಸ್‌ನಲ್ಲಿ ಮತ್ತು ಅನೇಕ ಡೆವಲಪ್‌ಮೆಂಟ್ಸ್ ಕಾರ್ಯಕ್ರಮಗಳಲ್ಲಿ ವಿಫಲರಾಗಿರುವುದನ್ನು ಮುಚ್ಚಿಕೊಳ್ಳಬೇಕು ಎನುವ ದೃಷ್ಟಿಯಿಂದ ತಮ್ಮ ಸಂಪೂರ್ಣವಾದಂಥ ಜವಾಬ್ದಾರಿಯನ್ನು ಮರೆತು ಆ ರೀತಿ ಕೇಂದ್ರ ಸರ್ಕಾರವನ್ನು ದೂರುವಂತಾದ್ದು ಈ ಸದನದ ಮುಂದೆ ಬಂದಿದೆ ಅದರ ಜೊತೆಯಲ್ಲಿ ತಮ್ಮ ವಿಫಲತೆಯನ್ನು ವೈಪಲ್ಯಗಳನ್ನು ತೋರಿಸಿಕೊಡಬಾರದು. ಎನ್ನುವ ರೀತಿಯಲ್ಲಿ ಕೆಲವು ಪದಗಳನ್ನು ಇದರಲ್ಲಿ ಉಪಯೋಗ ಮಾಡಿದ್ದಾರೆ ಇವರು ಹಿಂದೆ ಆರ್ಥ ಸಚಿವರಾಗಿದ್ದಾಗ ಅಂದರೆ ೧೯೮೬-೮೭ ೧೯೮೭-೮೮ ೧೯೮೮-೮೯ರಲ್ಲಿ ಅಂದರೆ ಸುಮಾರು ಐದಾರು ವರ್ಷ ಆರ್ಥಸಚಿವರಾಗಿ ತಮ್ಮ ಬಜೆಟ್ ಭಾಷಣ ಯಾವರೀತಿ ಮಾಡಿದ್ದಾರೆ ಎಂದು ನೋಡಿದೆ ಅವರು ಮಾಡಿರತಕ್ಕ ಬಡ್ಜೆಟ್ ಭಾಷಣ ಯಾವರೀತಿ ಮಾಡಿದ್ದಾರೆ ಎಂದು ನೋಡಿದೆ ಅವರು ಹಿಂದೆ ಮಾಡಿರತಕ್ಕ ಬಡ್ಜೆಟ್ ಭಾಷಣದಲ್ಲಿ ಒಂದು ಚಕಾರ ಶಬ್ದ ಕೂಡ ಕೇಂದ್ರಸರ್ಕಾರದ ಬಗ್ಗೆ ಯಾಗಲಿ. ಅಥವಾ ಕೇಂದ್ರಸರ್ಕಾರದಿಂದ ನಮಗೆ ಈ ರೀತಿಯಾಗಿ ಅನ್ಯಾಯವಾಗುತ್ತಿದೆ ಎಂದಾಗಲಿ, ಹೇಳಿಲ್ಲ. ಕೇಂದ್ರ ಸರ್ಕಾರದ ಇನ್‌ಕಮ್‌ಟ್ಯಾಕ್ಸ್ ವಿಚಾರದಲ್ಲಿಯಾಗಲಿ ವೆಲ್ತ್ ಟ್ಯಾಕ್ಸ್ ವಿಚಾರದಲ್ಲಿಯಾಗಲ್ಲಿ, ಎಕ್ಸೈಸ್ ಡ್ಯೂಟಿ ವಿಚಾರದಲ್ಲಿಯಾಗಲಿ, ಇನ್ನಿತರೆ ಯಾವುದೇ ಟ್ಯಾಕ್ಸ್ ವಿಚಾರದಲ್ಲಿಯಾಗಲಿ, ನಮಗೆ ಕೇಂದ್ರಸರ್ಕಾರದವರು ಅನ್ಯಾಯ ಮಾಡುತ್ತಿದ್ದಾರೆ ಎನ್ನುವಂಥ ಶಬ್ದವನ್ನು ಅವರ ೬ ವರ್ಷಗಳ

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದ ಸೂಚಿಸುತ್ತದೆ